ಆನಂದವನ್ನು ಮಾತ್ರ ನೀನು ಬಯಸುವೆಯಾ? ಭಗವಂತನೇ ಈ ಜಗತ್ತೆಲ್ಲಾ ಆಗಿದ್ದಾನೆ. ಕಣ್ಣು ತೆರೆದು ಎಲ್ಲೆಡೆ ಭಗವಂತನನ್ನು ಕಾಣು. ದೊಡ್ಡ ಆಲದಮರವಾಗಿ ಬೆಳೆದು ಅದರ ನೆರಳಿನಲ್ಲಿ ಸಾವಿರಾರು ಜನರಿಗೆ ಆಶ್ರಯ ನೀಡುವಂಥವನಾಗು." ಶ್ರೀರಾಮಕೃಷ್ಣರ ಈ ಮಹೋಪದೇಶ ಸ್ವಾಮಿ ವಿವೇಕಾನಂದರ ಜೀವನದ ದಿಕ್ಕನ್ನೇ ಬದಲಾಯಿಸಿತು. ಶ್ರೀರಾಮಕೃಷ್ಣರು ತಾವೂ ಭಗವಂತನನ್ನು ಸಾಕ್ಷಾತ್ಕರಿಸಿಕೊಂಡು, ಮಾನವಪ್ರಪಂಚಕ್ಕೆ ಭಗವಂತನನ್ನು ಕಾಣುವ ಹೊಸ ಸೂತ್ರವೊಂದನ್ನು ಕೂಡ ರಚಿಸಿಕೊಟ್ಟು ಹೋದರು. ಅದೇ "ಮೂರ್ಖದೇವೋ ಭವ", "ದರಿದ್ರದೇವೋ ಭವ" ಎಂಬ ಮಂತ್ರ. ದೇವಸ್ಥಾನದ ವಿಗ್ರಹಗಳಲ್ಲಿ ಭಗವಂತನನ್ನು ಕಾಣಬಹುದಾದರೆ, ಕಣ್ಣ ಮುಂದೆ ಜೀವಂತವಾಗಿ ನಡೆದಾಡುತ್ತಿರುವ ಜೀವಿಗಳಲ್ಲಿ, ಅದರಲ್ಲೂ ಬಡವ, ದೀನರಲ್ಲಿ ಅವನನ್ನು ಕಾಣಲಾಗದೇ? ಈ ಒಂದು ಸೂತ್ರವನ್ನು ಹಣವಂತರು, ರಾಜಕೀಯ ವ್ಯಕ್ತಿಗಳು, ಸರ್ಕಾರಿ ನೌಕರರು ತಮ್ಮ ಜೀವನದಲ್ಲಿ ಸ್ವಲ್ಪವಾದರೂ ಅಳವಡಿಸಿಕೊಂಡರೆ ಈ ಭೂಲೋಕವನ್ನು ಸ್ವರ್ಗವನ್ನಾಗಿ ಮಾಡಲಾಗದೇ! ಆಧುನಿಕ ಮಾನವ ಇದನ್ನು ಉತ್ಕಟವಾಗಿ ಚಿಂತಿಸಲಿ, ಅನುಷ್ಠಾನಕ್ಕೆ ತರಲು ಯತ್ನಿಸಲಿ. ಆಗ ಅರ್ಥವಾಗುತ್ತದೆ ಶ್ರೀರಾಮಕೃಷ್ಣರ ಸಂದೇಶ ಆಧುನಿಕ ಯುಗಕ್ಕೆ ಪ್ರಸ್ತುತವೇ, ಅಲ್ಲವೇ ಎಂಬುದು.

ಅನೇಕ ವೇಳೆ ನಾವು ನಮಗಿಂತ ಕಡಿಮೆಯವರೊಂದಿಗೆ ಹೋಲಿಸಿಕೊಂಡು ನಮಗೆ ಸಮಾನ ಇಲ್ಲ ಎಂದು ಮೆರೆಯುತ್ತೇವೆ. ನಮ್ಮನ್ನು ಮೀರಿಸಿರುವವರು ಎಷ್ಟೋ ಜನ ಇದ್ದಾರೆ. ನಮ್ಮ ಮೇಲಿರುವವರನ್ನು ಕಣ್ಣು ಎತ್ತಿ ನೋಡಿದಾಗ ಗೊತ್ತಾಗುವುದು ನಾವೆಷ್ಟು ಕುಬ್ಜರು ಎಂಬುದು. ಇದನ್ನು ವಿವರಿಸಲು ಒಂದು ಸಣ್ಣ ನಿದರ್ಶನವನ್ನು ಶ್ರೀರಾಮಕೃಷ್ಣರು ಕೊಡುತ್ತಿದ್ದರು: ಗಾಢಾಂಧಕಾರದಲ್ಲಿ ಮಿಂಚುಹುಳು ಹಾರಾಡುತ್ತಿತ್ತು. ಎಲ್ಲಿ ನೋಡಿದರೂ ಅಂಧಕಾರ. ಆದರೆ ಅದು ಇರುವ ಕಡೆ ಸ್ವಲ್ಪ ಕಾಂತಿ ಇತ್ತು. "ಆ ಕಾಂತಿಯು ನನ್ನಿಂದ ಬಂದುದು, ನಾನು ಜಗತ್ತಿಗೆ ಬೆಳಕನ್ನು ಕೊಡುತ್ತಿರುವೆನು" ಎಂದು ಅದು ಭಾವಿಸಿತು. ಸ್ವಲ್ಪ ಹೊತ್ತಾದ ಮೇಲೆ ಆಕಾಶದಲ್ಲಿ ನಕ್ಷತ್ರಗಳು ಥಳಥಳನೆ ಹೊಳೆಯಲು ಆರಂಭಿಸಿದವು. ಅವು ಭಾವಿಸಿದವು, ಈ ಪ್ರಪಂಚದ ಅಂಧಕಾರವನ್ನು ತಮ್ಮ ಕಾಂತಿಯಿಂದ ತಗ್ಗಿಸುತ್ತಿದ್ದೇವೆ ಎಂದು. ಸ್ವಲ್ಪ ಹೊತ್ತಾದ ಮೇಲೆ ಚಂದ್ರನೆದ್ದ. ಮೂಡಲ ದಿಕ್ಕಿನಿಂದ ಅವನು ಚೆಲ್ಲಿದ ಬೆಳದಿಂಗಳು ಪ್ರಪಂಚವನ್ನೆಲ್ಲಾ ವ್ಯಾಪಿಸಿತು. ನಕ್ಷತ್ರಗಳು ಇದ್ದರೂ ಇಲ್ಲದಂತೆ ಕಾಂತಿಗುಂದಿದವು. ಚಂದ್ರ, "ನಾನೀಗ ಪ್ರಪಂಚಕ್ಕೆ ಬೆಳಕನ್ನು ಕೊಡುತ್ತಿರುವೆ" ಎಂದು ಭಾವಿಸಿದ. ಸ್ವಲ್ಪ ಹೊತ್ತಾದ ಮೇಲೆ ಸೂರ್ಯ ಉದಯಿಸಿದ ಮೂಡಲಲ್ಲಿ. ಚಂದ್ರನನ್ನು ಕೇಳುವವರೇ ಇಲ್ಲ. ಪ್ರಪಂಚವೆಲ್ಲ ಸೂರ್ಯನ ಬೆಳಕಿನಲ್ಲಿ ಜಾಜ್ವಲ್ಯಮಾನವಾಗಿ ರಂಜಿಸುತ್ತಿದೆ. ಹೀಗೆ ಒಂದನ್ನು ಮೀರಿಸುವುದು ಮತ್ತೊಂದು ಇದೆ ಪ್ರಪಂಚದಲ್ಲಿ. ಇದನ್ನು ತಿಳಿದಾಗ ಮಾನವ ನಿಗರ್ವಿ ಆಗುವನು.

ಧನ ಬಂತು ಎಂದರೆ ಆಯಿತು, ನಮ್ಮ ಸಂತೋಷ, ನೆಮ್ಮದಿ ಎಲ್ಲ ಓಡಿಹೋಗುವುದು. ಆ ಹಣವನ್ನು ರಕ್ಷಿಸುವುದು, ಅದನ್ನು ವೃದ್ಧಿಮಾಡುವುದು ಇದರ ಕಡೆಗೇ ನಮ್ಮ ದೃಷ್ಟಿಯೆಲ್ಲ. ಅದನ್ನು ಖರ್ಚು ಮಾಡಿ ಭೋಗಿಸುವವರು ಒಂದು ಬಗೆ ಜನ. ಮತ್ತೊಂದು ಬಗೆಯ ಜನ ನಿಧಿಯನ್ನು ರಕ್ಷಿಸುವ ಘಟಸರ್ಪಗಳು. ಭೋಗ ಅವರ ಹಣೆಯಲ್ಲಿ ಬರೆದಿಲ್ಲ, ಅಷ್ಟೇ. ಅದರ ರಕ್ಷಣೆಯ ತಾಪತ್ರಯ ಎಂಬ ಒಂದೇ ಜಾಡ್ಯ ಅವರನ್ನು ಹಿಡಿದಿರುವುದು. ಇದನ್ನು ಉದಹರಿಸುವ ಒಂದು ಸ್ವಾರಸ್ಯವಾದ ಕಥೆಯನ್ನು ಶ್ರೀರಾಮಕೃಷ್ಣರು ಅನೇಕ ವೇಳೆ ಹೇಳುತ್ತಿದ್ದರು:

ಒಂದು ಊರಿನಲ್ಲಿ ಒಬ್ಬ ಕ್ಷೌರಿಕ ಇದ್ದ. ಅವನು ಆ ಊರಿನ ರಾಜನಿಗೆ ಕ್ಷೌರ ಮಾಡುತ್ತಿದ್ದ. ಆಗ ಅವನಿಗೆ ಬರುತ್ತಿದ್ದ ಸಂಬಳ ಕಡಿಮೆ. ಆದರೂ ಆಗಿನ ಕಾಲದಲ್ಲಿ ಹೊಟ್ಟೆಗೆ ಬಟ್ಟೆಗೆ ಸಾಕಾಗುತ್ತಿತ್ತು ಅದು. ಸಂತೋಷದಿಂದ ಇದ್ದ. ದಾರಿಯಲ್ಲಿ ಹೋಗುತ್ತಿದ್ದಾಗ ಆನಂದದಿಂದ ಹಾಡಿಕೊಳ್ಳುತ್ತಿದ್ದ. ಅವನು ಹೋಗುವ ದಾರಿಯಲ್ಲಿ ಒಬ್ಬ ಯಕ್ಷ ಇದ್ದ. ಈ ಕ್ಷೌರಿಕನ ಆನಂದವನ್ನು ನೋಡಿದ. ಹೇಗಾದರೂ ಮಾಡಿ ಇವನ ಆನಂದಕ್ಕೆ ಭಂಗ ತರಬೇಕೆಂದು ಆಶಿಸಿದ. ಒಂದು ದಿನ ಕ್ಷೌರಿಕ ಇವನಿದ್ದ ಮರದ ಕೆಳಗೆ ಬಂದಾಗ, "ನಿನಗೆ ಏಳು ಕೊಪ್ಪರಿಗೆ ಹಣ ಬೇಕೆ?" ಎಂದು ಕೇಳಿದ. ಇವನು ತಲೆ ಎತ್ತಿ ನೋಡಿದ, ಯಾರೂ ಕಾಣಲಿಲ್ಲ. ಆದರೆ ಧ್ವನಿ ಮಾತ್ರ ಕೇಳಿಸುತ್ತಿತ್ತು. ಕ್ಷೌರಿಕ, "ಹೌದು, ನನಗೆ ಬೇಕು" ಎಂದ. ಆಗ, " ಮನೆಗೆ ಹೋಗು. ಅದು ಬಂದಿರುವುದು" ಎಂದು ಹೇಳಿದ. ಕ್ಷೌರಿಕ ಕುತೂಹಲದಿಂದ ಮನೆಗೆ ಹೋಗಿ ನೋಡುತ್ತಾನೆ, ಏಳು ಕೊಪ್ಪರಿಗೆ ಹಣ ಸಿದ್ಧವಾಗಿತ್ತು. ಆರು ಕೊಪ್ಪರಿಗೆ ಹಣದಿಂದ ತುಂಬಿ ತುಳುಕುತ್ತಿತ್ತು, ಏಳನೆ ಕೊಪ್ಪರಿಗೆಯಲ್ಲಿ ಸ್ವಲ್ಪ ಕಡಿಮೆ ಇತ್ತು. ಇದನ್ನು ನೋಡಿ ಪರಮಾನಂದವಾಯಿತು ಕ್ಷೌರಿಕನಿಗೆ. ಏಳನೆ ಕೊಪ್ಪರಿಗೆಯನ್ನೂ ಭರ್ತಿಮಾಡಿಬಿಟ್ಟರೆ ಎಷ್ಟು ಚೆನ್ನಾಗಿ ಇರುವುದು ಎಂಬ ಆಸೆ ಬೇರೂರಿತು. ತಾನು ಮಿಗಿಸಿದ ಹಣವನ್ನೆಲ್ಲ ಅದಕ್ಕೆ ಹಾಕಿದ. ಅದು ಮಾಯಾಕೊಪ್ಪರಿಗೆ; ಎಷ್ಟು ಹಾಕಿದರೂ ಬೇಕು ಎನ್ನುತ್ತಿತ್ತೆ ಹೊರತು ಸಾಕು ಎನ್ನಲಿಲ್ಲ. ಅವನ ಹಿಂದಿನ ಸಂತೋಷ ಹೋಯಿತು. ಹಾಡುಗೀಡು ಎಲ್ಲಾ ಮಾಯವಾಯಿತು. ಏಳನೆ ಕೊಪ್ಪರಿಗೆಯನ್ನು ಪೂರ್ತಿಮಾಡುವ ಚಿಂತೆಯೊಂದೇ ಹಗಲು ರಾತ್ರಿ ಹಿಡಿಯಿತು. ರಾಜನಿಗೆ, "ನೀವು ಕೊಡುವ ಸಂಬಳ ಸಾಲದು" ಎಂದ. ರಾಜ ಸಂಬಳ ಜಾಸ್ತಿಮಾಡಿದ. ಕ್ಷೌರಿಕ ಹೆಚ್ಚು ಉಳಿಸಿದ, ಉಳಿಸಿದ್ದನ್ನು ಕೊಪ್ಪರಿಗೆಗೆ ಹಾಕಿದ. ಆದರೆ ಆ ಕೊಪ್ಪರಿಗೆ ಮಾತ್ರ ತುಂಬಲಿಲ್ಲ. ಅದು ಎಂದು ತುಂಬುವುದು ಎಂಬ ವ್ಯಾಕುಲವೊಂದೇ ಅವನನ್ನು ಶನಿಯಂತೆ ಹಿಡಿಯಿತು. ರಾಜ ಇವನ ಪೆಚ್ಚು ಮುಖವನ್ನು ನೋಡಿದ. ಸಂಬಳ ಮೊದಲಿಗಿಂತ ಜಾಸ್ತಿ ಮಾಡಿದರೂ ಇವನ ಮುಖದಲ್ಲಿ ಹಿಂದಿನ ಆನಂದ ಇಲ್ಲ. ಕೇಳಿದ, "ಏನು, ನಿನಗೇನಾದರೂ ಯಕ್ಷನ ಏಳು ಕೊಪ್ಪರಿಗೆ ಹಣ ಸಿಕ್ಕಿದೆಯೇನೋ, ಹೀಗಿದ್ದೀಯಲ್ಲ?" ಎಂದು. ಕ್ಷೌರಿಕನಿಗೆ ಆಶ್ಚರ್ಯ, ರಾಜನಿಗೆ ಇದು ಹೇಗೆ ಗೊತ್ತಾಯಿತು ಎಂದು. ಆಗ ರಾಜ ಹೇಳಿದ, "ನನ್ನನ್ನೂ ಆ ಯಕ್ಷ ಬಂದು 'ಏಳು ಕೊಪ್ಪರಿಗೆ ಹಣ ಬೇಕೆ?' ಎಂದು ಕೇಳಿದ. ನಾನು ಕೇಳಿದೆ, 'ಅದನ್ನು ಖರ್ಚು ಮಾಡಬೇಕೊ ಅಥವಾ ಸುಮ್ಮನೆ ಇಡಬೇಕೊ?' ಎಂದು. ಈ ಮಾತನ್ನು ಕೇಳಿದ ತಕ್ಷಣ ಅವನು ಓಡಿಹೋದ." ಕೊಪ್ಪರಿಗೆ ಹಣ ಬಂದರೆ ಅದನ್ನು ವೃದ್ಧಿ ಮಾಡಬೇಕೆಂಬ ಆಸೆ ಜೊತೆಜೊತೆಯಲ್ಲಿಯೇ ಬರುವುದು. ರಾಜ, "ಈ ಕ್ಷಣವೇ ಅವನಿಗೆ ದುಡ್ಡನ್ನು ಕೊಟ್ಟು ಬಿಡು" ಎಂದ. ಕ್ಷೌರಿಕ ಮರದ ಹತ್ತಿರ ಹೋಗಿ ಯಕ್ಷನಿಗೆ, "ನಿನ್ನ ಏಳು ಕೊಪ್ಪರಿಗೆ ಹಣ ತೆಗೆದುಕೊಂಡು ಹೋಗು" ಎಂದು ಪ್ರಾರ್ಥಿಸಿಕೊಂಡ. ಮನೆಗೆ ಹೋಗಿ ನೋಡುತ್ತಾನೆ, ಯಕ್ಷ ಕೊಟ್ಟಿದ್ದರ ಜೊತೆಗೆ, ತಾನು ಕೂಡಿ ಹಾಕಿ ಯಕ್ಷನ ಕೊಪ್ಪರಿಗೆಗೆ ಹಾಕಿದ್ದೆಲ್ಲವೂ ಮಾಯವಾಗಿತ್ತು!

(ಸ್ವಾಮಿ ಸೋಮನಾಥಾನಂದ, ನಗೆಗಾರ ಶ್ರೀರಾಮಕೃಷ್ಣ–ಪು. ೫೪, ೫೫, ೫೬)

# ಶಾಸ್ತ್ರಗಳ ಬೆಳಕಿನಲ್ಲಿ ಶ್ರೀರಾಮಕೃಷ್ಣರ ಬೋಧನೆ

ಸ್ವಾಮಿ ನಿತ್ಯಸ್ಥಾನಂದ

ಶ್ರೀರಾಮಕೃಷ್ಣರ ಉಪದೇಶಗಳಲ್ಲಿ ವೇದವೇದಾಂತಗಳ ಬೋಧನೆಯ ಮಾರ್ದನಿಯನ್ನು ಸ್ಪಷ್ಟವಾಗಿ ಕಾಣಬಹುದು. ಶಾಸ್ತ್ರಗಳ ಸಾರಸತ್ವವೇ ಅವರ ಮಾತುಗಳಲ್ಲಿ ಸರಳರೂಪದಲ್ಲಿ ಪ್ರಕಟವಾಗಿದೆ. ಈ ಅಂಶವನ್ನು ವಿದ್ವತ್ಪೂರ್ಣವಾಗಿ ವಿಶ್ಲೇಷಿಸಿರುವ ಪೂಜ್ಯ ಸ್ವಾಮೀಜಿಯವರು ರಾಮಕೃಷ್ಣ ಮಹಾಸಂಘದ ಪ್ರಧಾನಕೇಂದ್ರವಾದ ಬೇಲೂರುಮಠದಲ್ಲಿರುವ ಬ್ರಹ್ಮಚಾರಿಗಳ ಪ್ರಶಿಕ್ಷಣಕೇಂದ್ರದಲ್ಲಿ ಆಚಾರ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. 'ವಿವೇಕಪ್ರಭ' ಪತ್ರಿಕೆಯ ಪ್ರಥಮ ಸಂಪಾದಕರೂ ಮತ್ತು ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರೂ ಆಗಿದ್ದ ಪೂಜ್ಯರು ಹಲವಾರು ಕೃತಿಗಳನ್ನು ರಚಿಸಿದ್ದಾರೆ ಮತ್ತು ಅನುವಾದಿಸಿದ್ದಾರೆ.

ಶಾಸ್ತ್ರದ ಆಧಾರ ಅನುಭವ. ಶಾಸ್ತ್ರವು ಅನುಭವಿಸುವವರನ್ನು ಅರಸುತ್ತದೆ, ಕೇವಲ ಅಧ್ಯಯನ ಮಾಡುವವರನ್ನಲ್ಲ, ಅದರ ವ್ಯಾಖ್ಯಾನಕುಶಲರನ್ನಲ್ಲ, ಅದರ ಅನುವಾದಕರನ್ನಲ್ಲ. ಒಂದು ವೃಕ್ಷವು ನೀರು, ಗೊಬ್ಬರ, ಮುಂತಾದವುಗಳೆಲ್ಲಕ್ಕಿಂತ ಹೆಚ್ಚಾಗಿ ಬಯಸುವುದು ಸೂರ್ಯನ ಬೆಳಕನ್ನು. ಹಾಗೆಯೇ ಶಾಸ್ತ್ರವೂ ಕೂಡ ಅನುಭವದ ಬೆಳಕನ್ನು ಬಯಸುತ್ತದೆ. ಆ ಬೆಳಕು ಅದಕ್ಕೆ ಜೀವಸತ್ವವನ್ನು ನೀಡುತ್ತದೆ. ಅನೇಕರು ತಮ್ಮ ಉಪಯೋಗಕ್ಕಾಗಿ, ತಮ್ಮ ವಿದ್ವತ್ತನ್ನು ಮೆರೆಯುವುದಕ್ಕಾಗಿ ಶಾಸ್ತ್ರವನ್ನು ಬಳಸುತ್ತಾರೆ. ಆದರೆ ಕೆಲವರು ಮಾತ್ರ ತಮ್ಮ ಅನುಭವದ ನೀರೆರೆದು ಅದನ್ನು ಬೆಳೆಸುತ್ತಾರೆ, ಪೋಷಿಸುತ್ತಾರೆ. ಅನೇಕ ಶಾಸ್ತ್ರಗಳು ಅನುಭವಿಸುವವರಿಲ್ಲದೆ ಅಪ್ರಸ್ತುತವಾಗಿವೆ. ವೇದಗಳ ಅನೇಕ ಭಾಗಗಳು, ಉಪನಿಷತ್ತಿನ ವಿವಿಧ ವಿದ್ಯೆಗಳು ಅನುಭಾವಿಗಳ ಕೊರತೆಯಿಂದ ಅಪ್ರಸ್ತುತವಾಗಿವೆ. ಈಗ ಅವುಗಳನ್ನು ಓದಿದಾಗ ನಮಗೆ ಅವು ಅರ್ಥಹೀನವಾಗಿ ಕಂಡುಬರುತ್ತವೆ. ಶಾಸ್ತ್ರದ ಪರಂಪರೆಯು ಕೇವಲ ಕಂಠಪಾಠದಿಂದ ಉಳಿಯುವುದಿಲ್ಲ, ಅದರ ಅನುಷ್ಠಾನದಿಂದ ಉಳಿಯುತ್ತದೆ. ಅದು ಕೇವಲ ಮುಖಸ್ಥವಾದರೆ ಸಾಲದು; ಆಚಾರಸ್ಥವಾಗಬೇಕು, ಹೃದಯಸ್ಥವಾಗಬೇಕು. ಶಾಸ್ತ್ರವು ಹುಟ್ಟಿರುವುದೇ ಅನುಭವದಿಂದ. ಅನುಭಾವಿಗಳ ಉಸಿರಾಗಿ ಶಾಸ್ತ್ರ ಹೊರಹೊಮ್ಮುತ್ತದೆ. ಬ್ರಹ್ಮನ ಉಸಿರಿನ ಮೂಲಕ ನಾಲ್ಕು ವೇದಗಳು ಉದ್ಭವಿಸಿದವೆಂದು ಉಪನಿಷತ್ತು ಸಾರುತ್ತದೆ. ಅನುಭಾವಿಗಳ ಉಸಿರೇ ಆಗಿರುವ ಶಾಸ್ತ್ರವು ತನ್ನ ಉಸಿರನ್ನು ಕಳೆದುಕೊಳ್ಳುವಂತಾದಾಗ ಅದಕ್ಕೆ ಜೀವದಾನ ಮಾಡಲು ಅವತಾರಪುರುಷರು ಹುಟ್ಟಿಬರುತ್ತಾರೆ. ಶ್ರೀರಾಮಕೃಷ್ಣರು ಅಂತಹ ಅವತಾರಶ್ರೇಷ್ಠರು. ಅವರು ಅನಕ್ಷರಸ್ಥರಾದರೂ 'ಅಕ್ಷರ'ವಂತರು, ಶಾಸ್ತ್ರಜ್ಞಾನವಿಲ್ಲದಿದ್ದರೂ ಶಾಸ್ತ್ರವೇತ್ತರು. ಶಾಸ್ತ್ರ ಅವರಿಗೆ ಆಶ್ರಯವಾಗಿರಲಿಲ್ಲ, ಅವರೇ ಶಾಸ್ತ್ರಕ್ಕೆ ಆಶ್ರಯವಾಗಿದ್ದರು. ಶಾಸ್ತ್ರದಿಂದ ಅವರು ಪುಷ್ಟಿ ಪಡೆಯಬೇಕಾಗಿರಲಿಲ್ಲ, ಶಾಸ್ತ್ರವೇ ಅವರಿಂದ ಪುಷ್ಟಿ ಪಡೆಯುವಂತಾಯಿತು. ಸ್ವಾಮಿ ವಿವೇಕಾನಂದರು ಹೀಗೆ ಹೇಳುತ್ತಾರೆ: "ಈ ಕಾರಣಕ್ಕಾಗಿಯೇ ಈ ಬಾರಿ ಶ್ರೀರಾಮಕೃಷ್ಣರು ಅನಕ್ಷರಸ್ಥನ ಪಾತ್ರವನ್ನು ವಹಿಸಿದರು. ಅವರು ಅನಕ್ಷರಸ್ಥರಾಗಿದ್ದುದಕ್ಕೆ ಕಾರಣವೇನೆಂದರೆ, ಹಿಂದೂಗಳ ವೇದವೇದಾಂತಗಳಲ್ಲಿಯೂ ಇತರ ಧರ್ಮೀಯರ ಶಾಸ್ತ್ರಗ್ರಂಥಗಳಲ್ಲಿಯೂ ಹೇಳಿರುವ ಆಧ್ಯಾತ್ಮಿಕ ಅನುಭವಗಳೆಲ್ಲವೂ ಸತ್ಯ ಮತ್ತು ಮಾನವನು ಅವುಗಳಲ್ಲಿ ಸೂಚಿಸಿರುವ ಮಾರ್ಗದಲ್ಲಿ ಮುಂದುವರಿದರೆ ನಿಜವಾಗಿಯೂ ಆ ಅನುಭವಗಳನ್ನು ಪಡೆಯಬಹುದು ಎಂಬುದನ್ನು ಜಗತ್ತಿಗೆ ತೋರಿಸುವ ಸಲುವಾಗಿ." ಸ್ವಾಮಿ ವಿವೇಕಾನಂದರು ಮುಂದುವರಿದು ಹೇಳುತ್ತಾರೆ, "ಶ್ರೀರಾಮಕೃಷ್ಣರ ಜೀವನ ಚರಿತ್ರೆ ಒಂದು ಜಾಜ್ವಲ್ಯಮಾನವಾದ ದೀಪದಂತಿದೆ, ಇದರ ಬೆಳಕಿನಲ್ಲಿ ಹಿಂದೂಧರ್ಮದ ಉದ್ದೇಶವನ್ನು ತಿಳಿದುಕೊಳ್ಳಬಹುದು. ಶಾಸ್ತ್ರಗಳಲ್ಲಿ ಉಕ್ತವಾಗಿರುವ ಸಕಲವಿದ್ಯೆಗಳಿಗೂ ಅವರು ಮೈವೆತ್ತ ನಿದರ್ಶನ... ಶಾಸ್ತ್ರಗಳು ಕೇವಲ ಸಿದ್ಧಾಂತಗಳು, ಅವರಾದರೋ ಸಿದ್ಧರು! ಈ ಮಹಾನುಭಾವರು ತಮ್ಮ ಜೀವನದ ಐವತ್ತೊಂದು ವರ್ಷಗಳಲ್ಲಿ ಭಾರತೀಯರ ಐದು ಸಾವಿರ ವರ್ಷಗಳ ಆಧ್ಯಾತ್ಮಿಕ ಜೀವನವನ್ನು ಬಾಳಿದರು." ಈಗ ಶ್ರೀರಾಮಕೃಷ್ಣರ ಬೋಧನೆಯ ಮುಖ್ಯಾಂಶಗಳು ಯಾವುವು ಎಂಬುದನ್ನು ನೋಡೋಣ.



**೧. ಭಗವತ್ಸಾಕ್ಷಾತ್ಕಾರವೇ ಮನುಷ್ಯ ಜೀವನದ ಉದ್ದೇಶ:** "ಭಗವಂತನನ್ನು ಪ್ರೀತಿಸುವುದೇ ಮಾನವ ಜೀವನದ ಗುರಿ" ಎಂದು ಶ್ರೀರಾಮಕೃಷ್ಣರು ಮತ್ತೆ ಮತ್ತೆ ಹೇಳುತ್ತಾರೆ. "ನೀವು ಬಂದಿರುವುದು ಹಣ್ಣನ್ನು ತಿನ್ನುವುದಕ್ಕೆ, ಎಲೆ ಎಣಿಸುವುದಕ್ಕಲ್ಲ, ಕೊಂಬೆ

ಎಣಿಸುವುದಕ್ಕೂ ಅಲ್ಲ. ಹಣ್ಣನ್ನು ತಿಂದು ಆನಂದಪಡಿ." ಇಲ್ಲಿ ಹಣ್ಣನ್ನು ತಿನ್ನುವುದೆಂದರೆ ಭಗವಂತನನ್ನು ಅನುಭವಿಸುವುದು. ಇದೇ ಜೀವನಕ್ಕೆ ಸಾರ್ಥಕತೆಯನ್ನು ನೀಡುತ್ತದೆ. ಈ ಸಾರ್ಥಕತೆ ಮಾನವ ಜನ್ಮದಲ್ಲಿ ಮಾತ್ರ ಸಾಧ್ಯ. ಏಕೆಂದರೆ ಮಾನವನಲ್ಲಿ ಚೈತನ್ಯ ಹೆಚ್ಚು ಅಭಿವ್ಯಕ್ತವಾಗಿರುತ್ತದೆ ಅಥವಾ ಹಣ್ಣಾಗಿರುತ್ತದೆ ಎನ್ನಬಹುದು. ಸಸ್ಯ ಹಾಗೂ ಪ್ರಾಣಿವರ್ಗಗಳಲ್ಲೆಲ್ಲಾ ಚೈತನ್ಯವು ಹೆಚ್ಚು ಹೆಚ್ಚು ಅಭಿವ್ಯಕ್ತವಾಗುತ್ತ ಬಂದು, ಮಾನವನಲ್ಲಿ ಅದು ಪಕ್ವವಾಗುತ್ತದೆ. ಅದು ಅವನ ವ್ಯಕ್ತಿತ್ವದ ಸಾರವೇ ಆಗಿರುತ್ತದೆ. ಈಗ ನಾವು ಅದನ್ನು ತಿನ್ನದಿದ್ದರೆ, ತಿನ್ನುವ ಪ್ರಯತ್ನವನ್ನೂ ಮಾಡದಿದ್ದರೆ, ಈ ಜನ್ಮ ನಿರರ್ಥಕವಾಗುತ್ತದೆ. ಶಾಸ್ತ್ರದ ಅಭಿಪ್ರಾಯವೂ ಇದೇ ಆಗಿದೆ. ಬೃಹದಾರಣ್ಯಕ ಉಪನಿಷತ್ತಿನಲ್ಲಿ ಯಾಜ್ಞವಲ್ಕ್ಯರು ಹೇಳುತ್ತಾರೆ, **ಯೋ ವಾ ಏತದಕ್ಷರಂ ಗಾರ್ಗಿ ಅವಿದಿತ್ವಾ ಅಸ್ಮಾತ್ ಲೋಕಾತ್ ಪ್ರೇತಿ ಸ ಕೃಪಣಃ** – "ಹೇ ಗಾರ್ಗಿ, ಯಾರು ಆ ಅಕ್ಷರವನ್ನು (ಭಗವಂತನನ್ನು) ತಿಳಿದುಕೊಳ್ಳದೆ ಈ ಲೋಕದಿಂದ ತೆರಳುತ್ತಾನೊ, ಅವನು ನಿಕೃಷ್ಟನು."

ಕೇನೋಪನಿಷತ್ತಿನಲ್ಲಿಯೂ ಇದೇ ಅಭಿಪ್ರಾಯ ವ್ಯಕ್ತವಾಗಿದೆ: **ಇಹ ಚೇದವೇದೀದಥ ಸತ್ಯಮಸ್ತಿ, ನ ಚೇದಿಹಾವೇದೀತ್ ಮಹತೀ ವಿನಷ್ಟಿ** – "ಇಲ್ಲಿ ಈ ಜನ್ಮದಲ್ಲಿಯೇ ಆತ್ಮನನ್ನು ತಿಳಿದುಕೊಂಡರೆ ಅದೇ ಸತ್ಯ. ಇಲ್ಲಿ ತಿಳಿದುಕೊಳ್ಳದಿದ್ದರೆ ಅದೊಂದು ದೊಡ್ಡ ನಷ್ಟ"

ಯುವಕರಾಗಿರುವಾಗಲೇ ಆಧ್ಯಾತ್ಮಿಕ ಸಾಧನೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕೆಂದು ಶ್ರೀರಾಮಕೃಷ್ಣರು ಒತ್ತಿ ಹೇಳುತ್ತಿದ್ದರು. ಹೊತ್ತಿಗೆ ಮುಂಚೆ ಮೊಸರನ್ನು ಕಡೆಯಬೇಕೆಂದು ಅವರು ಉದಹರಿಸುತ್ತಿದ್ದರು. ಅನೇಕರು ಆಧ್ಯಾತ್ಮಿಕ ಸಾಧನೆಯನ್ನು ಮುದಿವಯಸ್ಸಿನಲ್ಲಿ ಮಾಡಿದರಾಯಿತೆಂದು ಭಾವಿಸುತ್ತಾರೆ. ಶ್ರೀರಾಮಕೃಷ್ಣರು ಹೇಳುತ್ತಾರೆ, "ಪ್ರಾಪಂಚಿಕ ವ್ಯಕ್ತಿಗಳು ಭಾವಿಸುತ್ತಾರೆ, 'ಈಗ ದೇವರ ವಿಚಾರ ಏಕೆ ಬೇಕು? ಸಾಯುವ ಸಮಯದಲ್ಲಿ ಅವನನ್ನು ನೆನೆದರಾಯಿತು' ಎಂದು. ಆದರೆ ಅವರು ಮರಣಶಯ್ಯೆಯಲ್ಲಿ ಮಲಗಿರುವಾಗ ತಮ್ಮ ಪತ್ನಿ ಅಥವಾ ಮಕ್ಕಳಿಗೆ ಹೇಳುತ್ತಾರೆ, 'ಆ ದೀಪದಲ್ಲಿ ಅಷ್ಟೊಂದು ಬತ್ತಿ ಏತಕ್ಕೆ? ಒಂದೇ ಬತ್ತಿ ಸಾಕು. ಇಲ್ಲದಿದ್ದರೆ ತುಂಬ ಎಣ್ಣೆ ಹೀರಿಕೊಳ್ಳುತ್ತದೆ.' ಅವರು ಸಾಯುವಾಗ ತಮ್ಮ ಪತ್ನಿ ಮತ್ತು ಮಕ್ಕಳ ಬಗ್ಗೆಯೇ ಯೋಚಿಸುತ್ತ, 'ಅಯ್ಯೋ! ನಾನು ಹೋದಮೇಲೆ ಇವರ ಗತಿ ಏನು?' ಎಂದು ರೋದಿಸುತ್ತಾರೆ." ಅದಕ್ಕಾಗಿಯೇ ಶಾಸ್ತ್ರವು (ಯೋಗವಾಸಿಷ್ಠ) ಹೇಳುತ್ತದೆ:

**ಯುವೈವ ಧರ್ಮಶೀಲಃ ಸ್ಯಾತ್ ಅನಿತ್ಯಂ ಖಲು ಜೀವಿತಂ। ಕೋ ಹಿ ಜಾನಾತಿ ಕಸ್ಯಾದ್ಯ ಮೃತ್ಯುಕಾಲೋ ಭವಿಷ್ಯತಿ ॥**

"ಯೌವನದಲ್ಲಿಯೇ ಧರ್ಮಸಾಧನೆಯಲ್ಲಿ ತೊಡಗಬೇಕು. ಈ ಜೀವನ ಅನಿತ್ಯವಷ್ಟೇ! ಯಾರಿಗೆ ಯಾವಾಗ ಮೃತ್ಯು ಬಂದೊದಗುತ್ತದೆಂದು ಯಾರು ತಾನೇ ಹೇಳಬಲ್ಲರು?"

**೨. ಭಗವಂತನನ್ನು ಪಡೆಯುವುದಕ್ಕೆ ವೈರಾಗ್ಯ ಅವಶ್ಯಕ:** ಶ್ರೀರಾಮಕೃಷ್ಣರು ತ್ಯಾಗದ ಜ್ವಲಂತಮೂರ್ತಿಯಾಗಿದ್ದರು, ತ್ಯಾಗದ ಪ್ರತಿರೂಪ ವಾಗಿದ್ದರು. ತ್ಯಾಗವಿಲ್ಲದೆ ಭಗವತ್ಸಾಕ್ಷಾತ್ಕಾರ ಸಾಧ್ಯವಿಲ್ಲ ಎಂದು ಅವರು ತಮ್ಮ ಜೀವನದ ಮೂಲಕವೂ, ಉಪದೇಶಗಳ ಮೂಲಕವೂ ತೋರಿಸಿಕೊಟ್ಟರು. ಒಂದೇ ಒಂದು ಪ್ರಾಪಂಚಿಕ ಆಸೆ ಮನಸ್ಸಿನಲ್ಲಿದ್ದರೂ ಭಗವತ್ಸಾಕ್ಷಾತ್ಕಾರವಾಗುವುದಿಲ್ಲವೆಂದು ಅವರು ಹೇಳುತ್ತಿದ್ದರು. ಅವರೇ ನೀಡಿರುವ ಒಂದು ಉದಾಹರಣೆಯ ಮೂಲಕ ವಿವರಿಸಬೇಕಾದರೆ, ಸೂಜಿಗೆ ದಾರವನ್ನು ಪೋಣಿಸುವಾಗ ಒಂದೇ ಎಳೆ ಹೊರಚಾಚಿ ಕೊಂಡಿದ್ದರೂ ಸೂಜಿಯ ಕಣ್ಣಿನ ಮೂಲಕ ಆ ದಾರ ಹೋಗುವುದಿಲ್ಲ. ಶ್ರೀರಾಮಕೃಷ್ಣರು ಹೇಳುತ್ತಿದ್ದರು, "ಎಲೆ ಅಡಕೆ ಹಾಕುವುದು, ಮೀನು ತಿನ್ನುವುದು, ಧೂಮಪಾನ ಅಥವಾ ದೇಹಕ್ಕೆ ಎಣ್ಣೆ ಸವರಿಕೊಳ್ಳುವುದು – ಇವೇ ಮುಂತಾದವುಗಳಿಂದ ತೊಂದರೆಯಿಲ್ಲ. ಇವುಗಳನ್ನು ಮಾತ್ರ ಬಿಡುವುದರಿಂದ ಏನು ಪ್ರಯೋಜನ? ಅತ್ಯಂತ ಮುಖ್ಯವಾಗಿ ಬೇಕಾಗಿರುವುದು ಕಾಮಕಾಂಚನ ತ್ಯಾಗ. ಈ ತ್ಯಾಗವೇ ನಿಜವಾದ ಶ್ರೇಷ್ಠವಾದ ತ್ಯಾಗ. ಗೃಹಸ್ಥರು ಆಗಾಗ ಏಕಾಂತಸ್ಥಳಕ್ಕೆ ಹೋಗಬೇಕು ಮತ್ತು ಭಗವದ್ಭಕ್ತಿಯನ್ನು ಬೆಳೆಸಿಕೊಳ್ಳಲು ಆಧ್ಯಾತ್ಮಿಕ ಸಾಧನೆ ಮಾಡಬೇಕು. ಅವರು ಮಾನಸಿಕವಾಗಿ ತ್ಯಾಗ ಮಾಡಬೇಕು. ಆದರೆ ಸಂನ್ಯಾಸಿಯು ಮಾನಸಿಕವಾಗಿಯೂ, ಭೌತಿಕವಾಗಿಯೂ ತ್ಯಾಗ ಮಾಡಬೇಕು,"

**ನ ಕರ್ಮಣಾ ನ ಪ್ರಜಯಾ ಧನೇನ ತ್ಯಾಗೇನೈಕೇ ಅಮೃತತ್ವಮಾನಶುಃ** – "ಕರ್ಮದಿಂದಾಗಲಿ, ಮಕ್ಕಳಿಂದಾಗಲಿ, ಸಂಪತ್ತಿನಿಂದಾಗಲಿ ಅಲ್ಲ, ತ್ಯಾಗದಿಂದಲೇ ಕೆಲವರು ಅಮೃತತ್ವವನ್ನು ಪಡೆದರು" (ಮಹಾನಾರಾಯಣ ಉಪನಿಷತ್). ಪ್ರಾಪಂಚಿಕ ವಿಷಯಗಳನ್ನು ಕರ್ಮದಿಂದಾಗಲಿ, ಹಣದಿಂದಾಗಲಿ ಸಂಪಾದಿಸಬಹುದು. ಆದರೆ ಅಮೃತತ್ವ ಎಂಬುದು ನಮ್ಮಲ್ಲಿ ಆಗಲೇ ಇರುವಂತಹುದು. ನಾವು ಹೊರಗಿರುವುದನ್ನು ತ್ಯಾಗ ಮಾಡಿದರೆ ಒಳಗಿರುವುದು ತಾನಾಗಿಯೇ ಲಭಿಸುತ್ತದೆ. **ಪರೀಕ್ಷ್ಯ ಲೋಕಾನ್ ಕರ್ಮಚಿತಾನ್ ಬ್ರಾಹ್ಮಣೋ ನಿರ್ವೇದಮಾಯಾತ್ ನಾಸ್ತ್ಯಕೃತಃ ಕೃತೇನ** – "ಕರ್ಮದಿಂದ ಲಭಿಸುವ ಲೋಕಗಳೆಲ್ಲವನ್ನೂ ಸಾಧಕನು ಚೆನ್ನಾಗಿ ಪರೀಕ್ಷಿಸಿ, ಕರ್ಮಸಂಬಂಧವಿಲ್ಲದ ಆತ್ಮನನ್ನು ಕರ್ಮದಿಂದ ಪಡೆಯಲಾಗುವುದಿಲ್ಲ ಎಂದು ನಿಶ್ಚಯಿಸಿ ವೈರಾಗ್ಯವನ್ನು ಪಡೆದನು."

ನಾವು ಕತ್ತಲೆ ಮತ್ತು ಬೆಳಕು ಎರಡನ್ನೂ ಪಡೆಯಲಾಗುವುದಿಲ್ಲ. ನಮಗೆ ಬೆಳಕು ಬೇಕಾದರೆ ಕತ್ತಲೆಯನ್ನು ಬಿಡಲೇಬೇಕು. ದೇವರು ಮತ್ತು ಪ್ರಪಂಚ ಬೆಳಕು ಕತ್ತಲೆಗಳಿದ್ದಂತೆ. ಅನೇಕರು ಪ್ರಪಂಚ ಮತ್ತು ಅಧ್ಯಾತ್ಮ ಎರಡನ್ನೂ ಬಯಸುತ್ತಾರೆ – ಮನಶ್ಶಾಂತಿಗೆ ಅಧ್ಯಾತ್ಮ, ಇಂದ್ರಿಯಸುಖಕ್ಕೆ ಪ್ರಪಂಚ. ಆದರೆ ಬೆಳಕು ಮತ್ತು ಕತ್ತಲೆ ಒಟ್ಟಿಗೆ ಇರಲು ಹೇಗೆ ಸಾಧ್ಯ? ಆದ್ದರಿಂದಲೇ ಶ್ರೀರಾಮಕೃಷ್ಣರು ಭಗವಂತನನ್ನು ಪಡೆಯಲು ತೀವ್ರ ವೈರಾಗ್ಯದ ಆವಶ್ಯಕತೆಯನ್ನು ಒತ್ತಿ ಹೇಳುತ್ತಾರೆ: "ಕಾಮ–ಕಾಂಚನ ತ್ಯಾಗವಿಲ್ಲದೆ ಜ್ಞಾನವುಂಟಾಗಲಾರದು. ತ್ಯಾಗದ ಉದಯದೊಂದಿಗೆ ಅವಿದ್ಯೆಯು ನಾಶವಾಗುತ್ತದೆ. ಭೂತಕನ್ನಡಿಯನ್ನು ಸೂರ್ಯಕಿರಣವು ನೇರವಾಗಿ ಅದರ ಮೇಲೆ ಬೀಳುವಂತೆ ಹಿಡಿದರೆ, ಅದು ಅನೇಕ

ವಸ್ತುಗಳನ್ನು ಸುಟ್ಟುಹಾಕುತ್ತದೆ. ಆದರೆ ಕೊಠಡಿಯ ಒಳಗೆ ಭೂತಕನ್ನಡಿಯನ್ನು ಆ ರೀತಿ ಉಪಯೋಗಿಸಲು ಸಾಧ್ಯವಿಲ್ಲ. ಹಾಗೆಯೇ ಮನಸ್ಸಿನ ವಿಷಯದಲ್ಲಿಯೂ ಕೂಡ. ಪ್ರಪಂಚದ ಕತ್ತಲುಕೋಣೆಯಿಂದ ಹೊರಗೆ ತೆಗೆದುಕೊಂಡು ಹೋಗಿ ದಿವ್ಯಜ್ಯೋತಿಯ ಪ್ರಖರ ಕಿರಣಗಳ ಕಡೆ ಅದನ್ನು ಹಿಡಿಯಬೇಕು. ಆಗ ನಿಜವಾದ ತ್ಯಾಗ ಬರುತ್ತದೆ ಮತ್ತು ಅದರೊಂದಿಗೆ ಅಜ್ಞಾನವೂ ನಾಶವಾಗುತ್ತದೆ."

ಯೋಗಸೂತ್ರ ಹೇಳುತ್ತದೆ, **ತೀವ್ರಸಂವೇಗಾನಾಂ ಆಸನ್ನಃ** ಅಂದರೆ, ತೀವ್ರ ವೈರಾಗ್ಯವುಳ್ಳವರಿಗೆ ಸಮಾಧಿಯು ದೊರಕಿದಂತೆಯೆ. ಅರುಣೋದಯವಾದರೆ ಸೂರ್ಯೋದಯವಾದಂತೆಯೇ ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಮಂದ ಮತ್ತು ತೀವ್ರ ವೈರಾಗ್ಯವನ್ನು ಕುರಿತು ಶ್ರೀರಾಮಕೃಷ್ಣರು ಹೀಗೆ ಹೇಳುತ್ತಾರೆ: "ಮಂದ ವೈರಾಗ್ಯವುಳ್ಳವನು ಹೇಳುತ್ತಾನೆ, 'ಕಾಲಕ್ಕೆ ತಕ್ಕಂತೆ ಆಗುತ್ತದೆ. ನಾನು ಸುಮ್ಮನೆ ಈಗ ದೇವರ ನಾಮವನ್ನು ಪಠಿಸುತ್ತೇನೆ.' ಆದರೆ ತೀವ್ರ ವೈರಾಗ್ಯವುಳ್ಳವನು ಭಗವಂತನಿಗಾಗಿ ಅತ್ಯಂತ ಹಂಬಲಿಸುತ್ತಾನೆ – ತಾಯಿ ಮಗುವಿಗಾಗಿ ಹಂಬಲಿಸುವಂತೆ. ತೀವ್ರ ವೈರಾಗ್ಯವುಳ್ಳವನು ದೇವರನ್ನಲ್ಲದೆ ಮತ್ತೇನನ್ನೂ ಅರಸುವುದಿಲ್ಲ. 'ಪ್ರಪಂಚವೊಂದು ಆಳವಾದ ಬಾವಿ, ತಾನು ಅದರಲ್ಲಿ ಬೀಳುವವನಿದ್ದೇನೆ' ಎಂದು ಅವನು ಭಾವಿಸುತ್ತಾನೆ. ಸಂಬಂಧಿಕರೆಲ್ಲ ಅವನಿಗೆ ವಿಷಸರ್ಪಗಳಂತೆ ಕಾಣುತ್ತಾರೆ. ಅವರಿಂದ ದೂರ ಓಡಿಹೋಗಲು ಅವನು ಬಯಸುತ್ತಾನೆ."

**೩. ಶ್ರದ್ಧೆ :** ಶ್ರೀರಾಮಕೃಷ್ಣರು ಶ್ರದ್ಧೆಗೆ ಹೆಚ್ಚು ಮಹತ್ವವನ್ನು ನೀಡುತ್ತಿದ್ದರು. 'ಶ್ರದ್ಧೆ' ಎಂದರೆ ಸಾಮಾನ್ಯ ನಂಬಿಕೆಯಲ್ಲ. ಕಠೋಪನಿಷತ್ತಿನ ಪ್ರಕಾರ ಶ್ರದ್ಧೆಯು ನಚಿಕೇತನನ್ನು ಪ್ರವೇಶಿಸಿದಾಗ ಅವನಲ್ಲಿ ವಿಶೇಷ ಧೈರ್ಯ ಉಂಟಾಯಿತು; ತಂದೆಯನ್ನೇ ಪ್ರಶ್ನಿಸುವ ಧೈರ್ಯ ಬಂತು, ತನ್ನಲ್ಲಿ ಅಪಾರ ಆತ್ಮವಿಶ್ವಾಸ ಉಂಟಾಯಿತು ಹಾಗೂ ಸತ್ಯವನ್ನು ಅರಿಯುವ ತೀವ್ರ ಹಂಬಲ ಜಾಗೃತವಾಯಿತು. ಶ್ರದ್ಧೆಯು ವ್ಯಕ್ತಿಯನ್ನು ಸುಮ್ಮನೆ ಕುಳಿತುಕೊಳ್ಳಲು ಬಿಡುವುದಿಲ್ಲ, ಏನನ್ನಾದರೂ ಸಾಧಿಸುವ ಪ್ರೇರಣೆಯನ್ನು ನೀಡುತ್ತದೆ. ಶ್ರೀರಾಮಕೃಷ್ಣರು ಹೇಳುವಂತೆ, ಪಕ್ಕದ ಕೋಣೆಯಲ್ಲಿ ಅಪಾರ ಸಂಪತ್ತು ಇದೆಯೆಂದು ಗೊತ್ತಾದರೆ ಕಳ್ಳನು ಸುಮ್ಮನೆ ಕುಳಿತುಕೊಳ್ಳಲು ಸಾಧ್ಯವೇ ಇಲ್ಲ – ಹೇಗಾದರೂ ಮಾಡಿ ಅದನ್ನು ದೋಚಿಕೊಂಡು ಹೋಗಲು ಪ್ರಯತ್ನಿಸುತ್ತಾನೆ.

"ನಾವು ನಡೆಯುವುದು ಶ್ರದ್ಧಾಶಕ್ತಿಯಿಂದ, ದೃಷ್ಟಿಶಕ್ತಿಯಿಂದಲ್ಲ" ಎಂದು ಏಸುಕ್ರಿಸ್ತನು ಹೇಳುತ್ತಾನೆ. ಇನ್ನೊಂದೆಡೆ ಅವನೇ ಶ್ರದ್ಧೆಯ ಮಹತ್ವವನ್ನು ಹೀಗೆ ಒತ್ತಿ ಹೇಳುತ್ತಾನೆ: " ನಿಮ್ಮಲ್ಲಿ ಒಂದು ಸಾಸಿವೆಕಾಳಿನಷ್ಟು ಶ್ರದ್ಧೆಯಿದ್ದರೂ ಸಾಕು, ನೀವು ಆ ಪರ್ವತವನ್ನು ಕುರಿತು, 'ಇಲ್ಲಿಂದ ಬೇರೆ ಕಡೆ ಹೋಗು' ಎಂದು ಹೇಳಿದರೆ ಆ ಸ್ಥಿರವಸ್ತುವೂ ಚಲಿಸುತ್ತದೆ. ನಿಮಗೆ ಯಾವುದೂ ಅಸಾಧ್ಯವಾಗುವುದಿಲ್ಲ." (St. Mathew, 17.20)

ಶ್ರೀರಾಮಕೃಷ್ಣರು ಶ್ರದ್ಧೆಯನ್ನು ಕುರಿತು ಹೀಗೆ ಹೇಳುತ್ತಾರೆ: "ಶ್ರದ್ಧೆಯ ಅಪಾರ ಶಕ್ತಿಯ ಬಗ್ಗೆ ನೀನು ಕೇಳಿರಬಹುದು. ಭಗವತ್ ಸ್ವರೂಪಿಯಾದ, ಪರಬ್ರಹ್ಮಸ್ವರೂಪಿಯಾದ ರಾಮನು ಸಮುದ್ರವನ್ನು ದಾಟಿ ಲಂಕೆಗೆ ಹೋಗಲು ಸೇತುವೆಯನ್ನು ಕಟ್ಟಬೇಕಾಯಿತು. ಆದರೆ ಆಂಜನೇಯನು ರಾಮನಾಮದ ಮೇಲಿನ ಶ್ರದ್ಧೆಯಿಂದ ಒಂದೇ ನೆಗೆತಕ್ಕೆ ಆ ಸಮುದ್ರವನ್ನು ದಾಟಿಬಿಟ್ಟನು. ಅವನಿಗೆ ಸೇತುವೆಯ ಆವಶ್ಯಕತೆಯೇ ಇರಲಿಲ್ಲ." "ಒಬ್ಬ ವ್ಯಕ್ತಿಗೆ ಭಗವಂತನಲ್ಲಿ ಶ್ರದ್ಧೆ ಇದ್ದರೆ ಗೋಹತ್ಯೆ, ಬ್ರಹ್ಮಹತ್ಯೆಯೇ ಮುಂತಾದ ಘೋರ ಅಪರಾಧವನ್ನು ಮಾಡಿದ್ದರೂ, ಶ್ರದ್ಧೆಯ ಬಲದಿಂದ ಅವನು ಉದ್ಧಾರವಾಗಿಬಿಡುತ್ತಾನೆ. ಅವನು ದೇವರಿಗೆ, 'ಹೇ ಪ್ರಭು, ನಾನು ಅಂತಹ ಕೃತ್ಯವನ್ನು ಇನ್ನು ಮಾಡುವುದಿಲ್ಲ' ಎಂದು ಹೇಳಿದರೆ ಸಾಕು, ಅವನು ಯಾವುದಕ್ಕೂ ಭಯಪಡಬೇಕಾಗಿಲ್ಲ."

ಶ್ರದ್ಧೆಯ ಬಗ್ಗೆ ಶಾಸ್ತ್ರ ಏನು ಹೇಳುತ್ತದೆ ಎಂಬುದನ್ನು ನೋಡೋಣ. ವೇದದಲ್ಲಿ ಬರುವ ಶ್ರದ್ಧಾಸೂಕ್ತವು ಈ ರೀತಿ ಕೊನೆಗೊಳ್ಳುತ್ತದೆ:

**ಶ್ರದ್ಧಾಂ ಪ್ರಾತರ್ಹವಾಮಹೇ ಶ್ರದ್ಧಾಂ ಮಾಧ್ಯಂದಿನಂ ಪರಿ । ಶ್ರದ್ಧಾಂ ಸೂರ್ಯಸ್ಯ ನಿಮ್ರುಚಿ ಶ್ರದ್ಧೇ ಶ್ರದ್ಧಾಪಯೇಹ ನಃ ॥**

"ನಾವು ಪ್ರಾತಃಕಾಲದಲ್ಲಿ ಶ್ರದ್ಧೆಯನ್ನು ಆರಾಧಿಸುತ್ತೇವೆ, ಮಧ್ಯಾಹ್ನವೂ ಶ್ರದ್ಧೆಯನ್ನು ಆರಾಧಿಸುತ್ತೇವೆ. ಸೂರ್ಯ ಮುಳುಗುವಾಗ ಶ್ರದ್ಧೆಯನ್ನು ಆರಾಧಿಸುತ್ತೇವೆ. ಹೇ ಶ್ರದ್ಧೆಯೇ, ನಮ್ಮನ್ನು ಶ್ರದ್ಧಾವಂತರನ್ನಾಗಿ ಮಾಡು."

ಒಂದು ಪ್ರದೇಶದಲ್ಲಿ ಮಳೆಯಾಗದೆ ಜನರು ಬರಗಾಲದಿಂದ ಕಂಗಾಲಾಗಿದ್ದರು. ಕ್ರೈಸ್ತ ಪಾದ್ರಿಯು ಜನರನ್ನೆಲ್ಲ ಒಟ್ಟು ಸೇರಿಸಿ ಅವರಿಗೆ ಈ ರೀತಿ ಉಪದೇಶ ಮಾಡಿದನು: "ನೀವು ಮಳೆಗಾಗಿ ಭಗವಂತನನ್ನು ಪ್ರಾರ್ಥಿಸಬೇಕು. ಭಗವಂತನು ನಿಮ್ಮ ಪ್ರಾರ್ಥನೆಯನ್ನು ಆಲಿಸುತ್ತಾನೆ. ಆದರೆ ನೀವು ಅತ್ಯಂತ ಶ್ರದ್ಧೆಯಿಂದ ಪ್ರಾರ್ಥಿಸಬೇಕು. ಇಂದು ರಾತ್ರಿ ನೀವೆಲ್ಲರೂ ನಾನು ಹೇಳಿದಂತೆ ಪ್ರಾರ್ಥಿಸಿ, ನಾಳೆ ನೀವೆಲ್ಲರೂ ಇಲ್ಲಿ ಬಂದು ಸೇರಬೇಕು." ಮರುದಿನ ಎಲ್ಲರೂ ಅದೇ ಸ್ಥಳದಲ್ಲಿ ಬಂದು ಸೇರಿದರು. ಪಾದ್ರಿಯು ಅವರನ್ನು ನೋಡಿ ಕೋಪದಿಂದ ನುಡಿದನು, "ಏನು, ನೀವು ನಿಜವಾಗಿಯೂ ಪ್ರಾರ್ಥಿಸಿದಿರಾ?"

"ಹೌದು ಸ್ವಾಮಿ, ನೀವು ಹೇಳಿದಂತೆಯೇ ನಿಜವಾಗಿಯೂ ಪ್ರಾರ್ಥಿಸಿದೆವು."

"ಶ್ರದ್ಧೆಯಿಂದ ಪ್ರಾರ್ಥಿಸಿದಿರಾ?"

"ಹೌದು ಸ್ವಾಮಿ."

"ಏನು ಹೌದು! ಹಾಗಾದರೆ ಕೊಡೆಯನ್ನು ಏಕೆ ತರಲಿಲ್ಲ!"

**೪.ವ್ಯಾಕುಲತೆಯೇ ಮುಖ್ಯ:** ಶ್ರೀರಾಮಕೃಷ್ಣರಲ್ಲಿ ಅಭೂತಪೂರ್ವವಾದ ಭಗವತ್‌ವ್ಯಾಕುಲತೆಯನ್ನು ಕಾಣುತ್ತೇವೆ. ಸುನಾಮಿಯಂತಹ ಆ ವ್ಯಾಕುಲತೆಯ ಮಹಾಪ್ರವಾಹವು ಎಲ್ಲವನ್ನೂ ಕೊಚ್ಚಿಕೊಂಡು ಹೋಯಿತು. ಪ್ರಾಪಂಚಿಕವಾದ ಯಾವುದೇ ವಿಷಯವೂ ಅದನ್ನು ತಡೆಯಲಾಗಲಿಲ್ಲ. ಆ ವ್ಯಾಕುಲತೆಯ ಪ್ರಭಾವಕ್ಕೆ ಒಳಗಾಗಿ ಅವರು ಒಂದೇ ಸಮನೆ ಆ ಕಡೆ ಈ ಕಡೆ ಗಮನ ಹರಿಸದೆ, ಭಗವಂತನ ಕಡೆಗೆ ಧಾವಿಸಿದರು. ಶ್ರೀರಾಮಕೃಷ್ಣರು ಹೇಳುತ್ತಿದ್ದರು, "ಈ ಕೆಳಗಿನ ಮೂರು ಆಕರ್ಷಣೆಗಳ ಒಟ್ಟು ಶಕ್ತಿಯಿಂದ ವ್ಯಕ್ತಿಯು ಭಗವಂತನೆಡೆಗೆ ಸೆಳೆಯಲ್ಪಟ್ಟಾಗ ಅವನನ್ನು ಕಾಣಬಹುದು: ಪ್ರಾಪಂಚಿಕನಿಗೆ ಪ್ರಾಪಂಚಿಕ ವಸ್ತುಗಳಲ್ಲಿರುವ ಆಕರ್ಷಣೆ, ತಾಯಿಗೆ ಮಗುವಿನ ಕಡೆ ಇರುವ ಆಕರ್ಷಣೆ ಮತ್ತು ಪತಿವ್ರತಾ ಸ್ತ್ರೀಗೆ ಪತಿಯ ಕಡೆ ಇರುವ ಆಕರ್ಷಣೆ – ಈ ಮೂರು ಆಕರ್ಷಣೆಗಳ ಒಟ್ಟು ಶಕ್ತಿಯಿಂದ ವ್ಯಕ್ತಿಯು ಭಗವಂತನ ಕಡೆ ಸೆಳೆಯಲ್ಪಟ್ಟರೆ ಆಗ ಅವನು ಭಗವಂತನನ್ನು ಕಾಣುತ್ತಾನೆ." ಇದೇ ರೀತಿಯ ಭಾವನೆ ಭಾಗವತದಲ್ಲಿ ಕೂಡ ಬರುತ್ತದೆ:

ಯಾ ಪ್ರೀತಿರವಿವೇಕಾನಾಂ ವಿಷಯೇಷ್ವನಪಾಯಿನೀ । ತ್ವಾಮನುಸ್ಮರತಃ ಸಾ ಮೇ ಹೃದಯಾನ್ಮಾಪಸರ್ಪತು ॥

"ಅವಿವೇಕಿಗೆ ನಶ್ವರವಾದ ಪ್ರಾಪಂಚಿಕ ವಿಷಯದಲ್ಲಿ ಯಾವ ರೀತಿ ತೀರದ ಪ್ರೀತಿ ಇರುತ್ತದೆಯೋ, ಅದೇ ರೀತಿಯ ಪ್ರೀತಿಯು ನಿನ್ನನ್ನು ನಿರಂತರ ಸ್ಮರಿಸುವ ನನ್ನ ಹೃದಯದಲ್ಲಿಯೂ ಸದಾ ನೆಲೆಸಿರಲಿ." ಇದು ಪ್ರಹ್ಲಾದನು ಭಗವಂತನಿಂದ ಬೇಡುವ ವರ.

**೫. ಶ್ರೀರಾಮಕೃಷ್ಣರ ಜೀವನ ವೇದಗಳ ಜೀವಂತ ಭಾಷ್ಯ:** ವೇದೋಪನಿಷತ್ತುಗಳಲ್ಲಿ ಮುಖ್ಯವಾಗಿ ನಮ್ಮ ಗಮನಕ್ಕೆ ಬರುವ ಅಂಶವೆಂದರೆ ಎಲ್ಲವನ್ನೂ ಸ್ವೀಕರಿಸುವ, ಅನುಭವಿಸುವ ಮನೋಭಾವ. ವೈದಿಕ ಋಷಿಗಳು ಜೀವನವನ್ನು ಅತ್ಯಂತವಾಗಿ ಪ್ರೀತಿಸಿದರು. ಜಗತ್ತನ್ನು ಅಸತ್ಯ, ದುಃಖಮಯ ಎಂದು ಹಳಿಯಲಿಲ್ಲ. ಜೀವನವನ್ನು **'ದುಃಖಾಲಯಮ್ ಅಶಾಶ್ವತಂ'** ಎಂದು ತಿರಸ್ಕರಿಸಲಿಲ್ಲ. **'ಶರೀರಂ ವ್ಯಾಧಿಮಂದಿರಂ'** ಎಂದು ಅದನ್ನು ತುಚ್ಛವಾಗಿ ಕಾಣಲಿಲ್ಲ, **'ಜೀವೇಮ ಶರದಃ ಶತಂ'**, (ನೂರು ಶರದೃತುಗಳವರೆಗೆ ಬಾಳೋಣ). **'ಕುರ್ವನ್ನೇವೇಹ ಕರ್ಮಾಣಿ ಜಿಜೀವಿಶೇತ್ ಶತಂ ಸಮಾಃ'** (ಕರ್ಮ ಮಾಡುತ್ತಲೇ ನೂರು ವರ್ಷಗಳ ಕಾಲ ಬಾಳಲು ಇಚ್ಛಿಸಬೇಕು) ಎನ್ನುವ ಧೋರಣೆ ಅವರದು. ಆಶಿಷ್ಠರೂ, ದೃಢಿಷ್ಠರೂ ಬಲಿಷ್ಠರೂ ಆಗಿ ದೀರ್ಘಕಾಲ ಬದುಕುವ ಇಚ್ಛೆ ಅವರದು. ಉತ್ತಮ ಅಂಗಾಂಗವುಳ್ಳವರಾಗಿ (**ಆಪ್ಯಾಯಂತು ಮಮಾಂಗಾನಿ** ಇತ್ಯಾದಿ), ಇಂದ್ರಿಯಗಳ ಮೂಲಕ ಶುಭವಾದದ್ದನ್ನೇ ಸ್ವೀಕರಿಸುತ್ತಾ (**ಭದ್ರಂ ಕರ್ಣೇಭಿಃ** ಇತ್ಯಾದಿ), ಸಮೃದ್ಧ ಜೀವನವನ್ನು ನಡೆಸುತ್ತಾ, ನಾಡಿನ ಸಂಪತ್ತನ್ನೂ ವೃದ್ಧಿಸುತ್ತ (**ಅನ್ನಂ ಬಹು ಕುರ್ವೀತ** ಇತ್ಯಾದಿ), ಎಲ್ಲವನ್ನೂ ಈಶಾವೃತವಾದುದೆಂದು ಅನುಭವಿಸುತ್ತ (**ಈಶಾವಾಸ್ಯಮಿದಂ ಸರ್ವಂ** ಇತ್ಯಾದಿ), ತಂದೆತಾಯಿಗಳು ಗುರು ಅತಿಥಿಗಳನ್ನು ಆರಾಧಿಸುತ್ತ (**ಮಾತೃದೇವೋಭವ** ಇತ್ಯಾದಿ), ಕೌಟುಂಬಿಕ ಹಾಗೂ ಸಾಮಾಜಿಕ ಮೌಲ್ಯಗಳನ್ನು ಕಡೆಗಣಿಸದೆ, "ಇದು ಲೌಕಿಕ, ಇದು ಆಧ್ಯಾತ್ಮಿಕ" ಎಂದು ಭೇದವೆಣಿಸದ ತೃಪ್ತಿಯ ಆನಂದದ ಜೀವನ ಅವರದು. ಅವರು ನಿಸರ್ಗವನ್ನೂ ಬಯಸಿದರು, ಸ್ವರ್ಗವನ್ನೂ ಬಯಸಿದರು ಮತ್ತು ಮೋಕ್ಷವನ್ನೂ ಬಯಸಿದರು. ನಚಿಕೇತನು ಕೇಳಿದ ಮೂರು ವರಗಳು ಕೌಟುಂಬಿಕಸುಖ, ಲೌಕಿಕಸುಖ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ಪ್ರತಿನಿಧಿಸುತ್ತವೆ. ವೈದಿಕ ಋಷಿಗಳು ಸಮಗ್ರವಾಗಿ ಜೀವನವನ್ನು ಸ್ವೀಕರಿಸಿದರು, ಸಮಸ್ತವನ್ನೂ ಅನುಭವಿಸಿದರು – ಜೀವನವನ್ನೂ ಅನುಭವಿಸಿದರು, ನಿಸರ್ಗವನ್ನೂ ಅನುಭವಿಸಿದರು ಮತ್ತು ಭಗವಂತನನ್ನೂ ಅನುಭವಿಸಿದರು. **'ಅನಿತ್ಯಮಸುಖಂ ಲೋಕಂ'** ಎಂದು ಹೇಳಲಿಲ್ಲ. ದುಃಖತ್ರಯಗಳ ಹೊಡೆತವನ್ನು ಸಹಿಸಲಾಗದೆ ಅತೀತದ ಕಡೆಗೆ ಮನಸ್ಸನ್ನು ಹರಿಸಬೇಕು (**ದುಃಖತ್ರಯಾಭಿಘಾತಾತ್ ಜಿಜ್ಞಾಸಾ**) ಎಂಬ ಕಲ್ಪನೆ ಅವರಲ್ಲಿ ಇರಲೇ ಇರಲಿಲ್ಲ.

ಶ್ರೀರಾಮಕೃಷ್ಣರಲ್ಲಿಯೂ ನಾವು ಇದೇ ಭಾವವನ್ನು ಕಾಣುತ್ತೇವೆ. ಮೊದಲನೆಯದಾಗಿ ಅವರು ಎಲ್ಲವನ್ನೂ ಅನುಭವಿಸಿದರು; ಜೀವನವನ್ನು ದೂಷಿಸಲಿಲ್ಲ. ಬಾಲ್ಯದಲ್ಲಿಯೇ ಅವರು ಪ್ರಕೃತಿಸೌಂದರ್ಯವನ್ನು ಅನುಭವಿಸುತ್ತ ಮೈಮರೆಯುತ್ತಿದ್ದರು. ನಾವು ಏನನ್ನೂ ಅನುಭವಿಸುವುದಿಲ್ಲ, ಎಲ್ಲವನ್ನೂ ಆಲೋಚನೆಗಳಿಂದ ಮುಚ್ಚಿಬಿಡುತ್ತೇವೆ. ಬಾಹ್ಯಸಾಧನೆಯಲ್ಲಿ ಉನ್ಮತ್ತರಾಗಿ ಆ ಕಡೆ ಈ ಕಡೆ ತಿರುಗಲೂ ಸಮಯವಿಲ್ಲದೆ ಸ್ಪರ್ಧಾಮಾರ್ಗದಲ್ಲಿ ಓಡುತ್ತಿದ್ದೇವೆ. ಜೀವನವನ್ನು ಅನುಭವಿಸುವುದಕ್ಕೆ ನಮಗೆ ಸಮಯವೆಲ್ಲಿ? ನಾವು ಹೇಗೋ ಜೀವನ ಕಳೆಯುತ್ತೇವೆ, ಅನುಭವಿಸುವುದಿಲ್ಲ. ಈ ಅನುಭವಕಲೆಯನ್ನು ನಾವು ಶ್ರೀರಾಮಕೃಷ್ಣರಿಂದ ಕಲಿಯಬೇಕು. ಕಪ್ಪು ಮೋಡದ ಹಿನ್ನೆಲೆಯಲ್ಲಿ ಬೆಳ್ಳಕ್ಕಿಯ ಸಾಲನ್ನು ಅವರು ನೋಡಿದಾಗ, ಬೆಳ್ಳಕ್ಕಿಯು ಯಾವ ಪಕ್ಷಿಜಾತಿಗೆ ಸೇರಿದ್ದು, ಮೋಡಗಳಲ್ಲಿ ಎಷ್ಟು ಬಗೆ ಎಂದೆಲ್ಲ ಆಲೋಚಿಸಿದ್ದರೆ ಬಹುಶಃ ಅವರು ಆ ಸೌಂದರ್ಯವನ್ನು ಅನುಭವಿಸುತ್ತಿರಲಿಲ್ಲ ಹಾಗೂ ಸಮಾಧಿಮಗ್ನರೂ ಆಗುತ್ತಿರಲಿಲ್ಲ. ಅವರು ಎಲ್ಲವನ್ನೂ ಗಮನವಿಟ್ಟು ನೋಡುತ್ತಿದ್ದರು, ಎಲ್ಲದರಿಂದಲೂ ಏನನ್ನಾದರೂ ಕಲಿಯುತ್ತಿದ್ದರು. ಅವರಲ್ಲಿ ಯಾಂತ್ರಿಕತೆ ಇರಲಿಲ್ಲ. ಊಟವನ್ನು ಅನುಭವಿಸಿ ಉಣ್ಣುತ್ತಿದ್ದರು. ಅನೇಕರು ಯಾಂತ್ರಿಕವಾಗಿ ಯಾವ ರುಚಿಯ ಅರಿವೂ ಇಲ್ಲದೆ ಊಟಮಾಡುತ್ತಾರೆ. ಅವರು ಜಗತ್ತನ್ನು ಹಳಿಯಲಿಲ್ಲ, ಅಸತ್ಯವೆಂದು ತಿರಸ್ಕರಿಸಲಿಲ್ಲ. ಅವರು ಅದನ್ನು ಭಗವಂತನ ಆವಿರ್ಭಾವವೆಂದು, ಅವನ ಮಹಿಮೆ ಎಂದು ಪರಿಗಣಿಸಿದರು. ಆದರೆ ಅವರಲ್ಲಿ ಜ್ವಲಂತ ತ್ಯಾಗವೂ ಇತ್ತು. **'ತೇನ ತ್ಯಕ್ತೇನ ಭುಂಜೀಥಾಃ'** (ತ್ಯಾಗದ ಮೂಲಕ ಅದನ್ನು ಅನುಭವಿಸು) ಎಂಬುದು ಅವರ ಆದರ್ಶವಾಗಿತ್ತು. ನಿಜವಾದ ತ್ಯಾಗ ಮನೋಭಾವವಿದ್ದರೆ ಎಲ್ಲವೂ ಆನಂದದಾಯಕವಾಗುತ್ತದೆ. ಇದು ಪ್ರೇಕ್ಷಕರಾಗಿ ನಿಂತು ನಾಟಕವನ್ನು ಅನುಭವಿಸುವಂತೆ. ಜಗತ್ತನ್ನು ಅನುಭವಿಸುವುದು ಎಂದರೆ ಭೋಗಿಸುವುದು ಎಂಬ ತಪ್ಪು ಕಲ್ಪನೆ ಇದೆ. ಆದರೆ ಭೋಗಬುದ್ಧಿ ಹೊರಟುಹೋದಾಗಲೇ ಜಗತ್ತು ಆನಂದದಾಯಕವಾಗುವುದು.